**ದಿನಾಂಕಃ 13-10-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ **ಸವಾಲು :-ಶ್ರೀ.ಎಸ್.ಎಸ್.ಬಿ. ವಕೀಲರಿಂದ ಆರೋಪಿಯ ಪರವಾಗಿ:-**

ಮೃತ ದೇಹವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ ಅಲ್ಲಿ ಎಂ.ಎಲ್.ಸಿ ತೆಗೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಠಾಣೆಗೆ ದೂರು ನೀಡುವಾಗ ನೀವು ಎಂ.ಎಲ್.ಸಿ ಯನ್ನು ತೆಗೆದುಕೊಂಡು ಹೋಗಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ಗೆ ಹಾಜರಾಗಲು ಪೋಲೀಸರು ನಿಮಗೆ ನೋಟೀಸ್ ನೀಡಿರುತ್ತಾರಾ ಎಂದರೆ ಸಾಕ್ಷಿಯು ಇಲ್ಲ ಕರೆ ಮಾಡಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಮತ್ತು ಬೈಕ್ ಸವಾರ ಒಂದೇ ಬೈಕ್ ನಲ್ಲಿ ಹೋಗುತ್ತಿದ್ದೀರೀ ಆದರೆ ಬೈಕ್ ಸವಾರ ಮದ್ಯಾಪಾನ ಮಾಡಿದ್ದರಿಂದ ನೀವು ಇಳಿದು ಆಟೋಗಾಗಿ ಕಾಯುತ್ತಾ ಇರುತ್ತೀರೀ ಎಂದರೆ ಸಾಕ್ಷಿಯು ಒಂದೇ ಬೈಕ್ ನಲ್ಲಿ ಹೋಗುತ್ತಿರಲಿಲ್ಲ, ಮದ್ಯಾಪಾನ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ, ಆದರೆ ನಾನು ಆಟೋಗಾಗಿ ಕಾಯುತ್ತಿದ್ದೇ ಎಂದು ನುಡಿಯುತ್ತಾರೆ. ಅಪಘಾತ ಸ್ಥಳದ ಮುಖ್ಯ ರಸ್ತೆಯಲ್ಲಿ ಹಂಪ್ಸ್ ಹಾಕಿದ್ದರು ಎಂದರೆ ಸರಿ.

2.ಬೈಕ್ ಸವಾರ ಎಲ್ಮೇಟ್‌ನ್ನು ಹಾಕಿರಲಿಲ್ಲ ಅವರೇ ನಿರ್ಲಕ್ಷತನದಿಂದ ಅಪಘಾತ ಆಗಿರುತ್ತದೆ ಎಂದರೆಸಾಕ್ಷಿಯು ಎಲ್ಮೇಟ್ ನ್ನು ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ ಆದರೆ ಅಪಘಾತ ಆಗಿ ಬಿದ್ದಾಗ ನಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-1 ದೂರಿನಲ್ಲಿ ಇವರೇ ಆರೋಪಿ ಎಂದು ನೀವು ನಮೂದು ಮಾಡಿಲ್ಲ ಎಂದರೆ ಸರಿ. ಆರೋಪಿಯನ್ನು ನೀವು ಘಟನ ಸ್ಥಳದಲ್ಲಿ ನೋಡಿಲ್ಲ ಎಂದರೆ ಸಾಕ್ಷಿಯು ತುಂಬಾ ಜನ ತುಂಬಿಕೊಂಡಿದ್ದರು, ಆಗಾಗಿ ಇವರೇ ಎಂದು ನೋಡಿಲ್ಲ ಎಂದು ನುಡಿಯುತ್ತಾರೆ. ನೀವು ಈ ದಿನ ಆರೋಪಿಯು ನ್ಯಾಯಾಲಯದಲ್ಲಿ ನಿಂತಿರುವುದರಿಂದ ಇವರೇ ಆರೋಪಿ ಎಂದು ಊಹೆಯ ಮೇಲೆ ಹೇಳುತ್ತಿದ್ದೀರೀ ಎಂದರೆ ಸರಿ. ಅಪಘಾತ ಪಡಿಸಿದ ವ್ಯಕ್ತಿ ಇಂತಹವರೇ ಎಂದು ನಿಖರವಾಗಿ ನಿಮಗೆ ಗೊತ್ತಿಲ್ಲ ಎಂದರೆ ಸರಿ. ಮೃತ ವ್ಯಕ್ತಿ ನಿಮ್ಮ ಸಂಬಂಧಿಕರು ಆಗಿದ್ದರಿಂದ ಅವರಿಗೆ ಪರಿಹಾರ ಹಣ ಕೊಡಿಸುವ ಉದ್ದೇಶದಿಂದ ಸುಳುಳ ದೂರನಲ್ಲು ದಾಖಲಿಸಿರತ್ತೀರೀ ಎಂದರೆ

ಸರಿಯಲ್ಲ. ಈ ವ್ಯಕ್ತಿಗೂ ಹಾಗೂ ಈ ಪ್ರಕರಣಕ್ಕೂ ಸಂಬಂದ ಇಲ್ಲ ಎಂದರೆ ಸಾಕ್ಷಿಯು ಘಟನ ಸ್ಥಳದಲ್ಲಿ ಸಾಕಷ್ಟು ಜನ ಇದ್ದು ಇವರೇ ಎಂದು ಹೇಳಲು ಆಗುವುದಿಲ್ಲ, ಆದರೆ ನ್ಯಾಯಾಲಯದ ಮುಂದೆ ಇವರು ಇರುವುದರಿಂದ ಊಹೆ ಮಾಡಿ ಇವರೇ ಇರಬಹುದು ಎಂದು ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**